ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ 37ನೇ ಸಂಚಿಕೆ ಕೊಪ್ಪ 18-5-1986 ಭಾನುವಾರ ಬೆಲೆ 40 ಪೈಸೆ

ಕಾಮಗಾರಿಗಳಿಗಾಗಿ 34.81 ಲಕ್ಷ ರೂ. ವೆಚ್ಚ

ಕೊಪ್ಪ: ಕೊಪ್ಪ ತಾ॥ನಲ್ಲಿ ಲೋಕೋಪಯೋಗಿ ಕಾಮಗಾರಿಗಳಿಗಾಗಿ ಕಳೆದ ವರ್ಷ 56.68 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದ್ದು ಇದರಲ್ಲಿ 34.81 ಲಕ್ಷ ರೂ.ಗಳನ್ನು ವೆಚ್ಚ ಮಾಡಿ ರಸ್ತೆ, ಸೇತುವೆ ಮತ್ತು ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂದು ಸಚಿವ ಗೋವಿಂದ ಗೌಡರು ತಿಳಿಸಿದ್ದಾರೆ. ಜಯಪುರ-ಬಾಳೆಹೊಳೆ ರಸ್ತೆ, ನ.ರಾ.ಪುರ-ಶೃಂಗೇರಿ ರಸ್ತೆ, ಬಾಳಗಡಿ-ಮೇಲ್ಪಾಲ್ ರಸ್ತೆಗಳ ದುರಸ್ತಿಗಾಗಿ 4.50 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಿದ್ದು ಈಗಾಗಲೇ ಈ ಕಾರ್ಯಕ್ಕೆ 66,000 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದರು.

ಜೊಮ್ಲಾಪುರದ ಬಚ್ಚಣಿಕೆ ಹಳ್ಳಕ್ಕೆ ಮತ್ತು ಗಡಿಕಲ್ಲು-ಬಂಡಿಗಡಿ ರಸ್ತೆಯ ಸೇತುವೆ ನಿರ್ಮಾಣಕ್ಕಾಗಿ 4 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಿದ್ದು ಈಗಾಗಲೇ ಈ ಕಾರ್ಯಕ್ಕೆ 60,000 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ

ವಿಶೇಷ ಘಟಕ ಯೋಜನೆಯಲ್ಲಿ ಮಲಗಾರ್ ಪರಿಶಿಷ್ಟ ಕಾಲೋನಿಗೆ ರಸ್ತೆ ನಿರ್ಮಾಣಕ್ಕಾಗಿ 3.50 ಲಕ್ಷ ರೂ.ಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು 1.20 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದರು. (4ನೇ ಪುಟಕ್ಕೆ)

ತಾಳಿಭಾಗ್ಯ : ಸರಳ ಸುಂದರ ಸಮಾರಂಭ

ಬಿಳಾಲುಕೊಪ್ಪ: "ಹಿಂದೆ ಒಬ್ಬ ಬಡವ ಮದುವೆ ಮಾಡಿಕೊಂಡರೆ, ಅದರಿಂದಾದ ಸಾಲ ತೀರಿಸಲು ಅವನ ಮಕ್ಕಳು-ಮೊಮ್ಮಕ್ಕಳೆಲ್ಲ ಸಾಹುಕಾರನ ಮನೆಯಲ್ಲಿ ದುಡಿಯಬೇಕಾಗುತ್ತಿತ್ತು. ಇಂಥದನ್ನು ತಪ್ಪಿಸಲು ರಾಮಕೃಷ್ಣ ಹೆಗ್ಗಡೆಯವರು ಯೋಚಿಸಿ ಜಾರಿಗೆ ತಂದಿರುವ ತಾಳಿಭಾಗ್ಯ ಯೋಜನೆಯಿಂದ ಎಲ್ಲ ಬಡವರೂ ಪ್ರಯೋಜನ ಪಡೆಯಬೇಕು" ಎಂದು ಸಚಿವ ಗೋವಿಂದಗೌಡರು ಇಲ್ಲಿ ಕರೆ ನೀಡಿದರು.

ಮೇ 18ರಂದು ಇಲ್ಲಿ ತಾಳಿ ಭಾಗ್ಯ ಯೋಜನೆಯನ್ವಯ ನಡೆದ ಸಾಮೂಹಿಕ ವಿವಾಹದಲ್ಲಿ ವಧೂವರರಿಗೆ ಮಾಂಗಲ್ಯ ವಿತರಿಸಿ ಮಾತನಾಡುತ್ತಿದ್ದ ಅವರು ಇಲ್ಲಿನ ಮದುವೆಗಳ ನಂತರ ಯಾರೂ ಬೇರೆ ಯಾವುದೇ ಕಾರ್ಯಕ್ಕೆಂದು ಪುನಃ ದುಂದು ವೆಚ್ಚ ಮಾಡಕೂಡದೆಂದು ತಿಳಿಸಿ, ನೂತನ ವಧೂವರರಿಗೆ "ಹೆಚ್ಚು ಮಕ್ಕಳನ್ನು ಹೆರಬೇಡಿ" ಎಂದು ಕಿವಿ ಮಾತು ಹೇಳಿದರು.

ಸ್ಥಳೀಯ ಜೇಸೀಸ್ ಅಧ್ಯಕ್ಷ ಪಿ.ಎಸ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿಗಳು ವಧೂವರರಿಗೆ ಸರ್ಕಾರದ ಸೀರೆ, ಪಂಚೆ ವಿತರಿಸಿದರು. ಎನ್. ವಿ. ಆನಂದರಾಮ ಭಟ್, ಪ್ರಭಾಕರ ಆರ್. ಕಲ್ಲೆ, ಮೊಹಮದ್ ಸಾದಿಕ್ ಮುಖ್ಯ ಅತಿಥಿಗಳಾಗಿದ್ದರು

ಬಿಳಾಲುಕೊಪ್ಪ ಮಾರುತಿ ಜೇಸೀಸ್, ಕೊಪ್ಪ ಲಯನ್ಸ್ ಮತ್ತು ರೋಟರಿ ಕ್ಲಬ್‌ಗಳು, ಬಿಳಾಲುಕೊಪ್ಪ ಮತ್ತು ಬಸರಿಕಟ್ಟೆಗಳ ಯುವಕ ಮತ್ತು ಯುವತಿ ಮಂಡಳಿಗಳು ಹಾಗೂ ಕೊಪ್ಪ ತಾ॥ ತಾಳಿ ಭಾಗ್ಯ ಕಲ್ಯಾಣ ಸಮಿತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮ ಸರಳ, ಸುಂದರವಾಗಿ ಅಚ್ಚುಕಟ್ಟಾಗಿ ನೆರವೇರಿತು. ಸುಮಾರು 600 ಕ್ಕೂ ಹೆಚ್ಚು ಜನ ಯಾವುದೇ ಜಾತಿ ಭೇದವಿಲ್ಲದೆ, ಮದುವೆಯ ಸಂಭ್ರಮದೊಂದಿಗೆ ನೆರೆದಿದ್ದರು, ಹಾಗೇ ಸಾಮೂಹಿಕವಾಗಿ ಸಿಹಿಯೂಟ ಉಂಡರು. 17 ಜೊತೆ ವಿವಾಹಗಳು ನಡೆದುವು. ಇದರಲ್ಲಿ 7 ಜೊತೆ ಇತರ ಜಾತಿಯವರಾಗಿದ್ದರು.

ಹಲ್ಲೆ, ರಾಜಿ, ಪೋಲೀಸ್, ಇತ್ಯಾದಿ .... ಕೆಲ ಸಂಗತಿಗಳು

ಕೊಪ್ಪ: ಇಲ್ಲಿ ಕಳೆದ ಒಂದು ತಿಂಗಳಿಂದೀಚೆಗೆ ನಡೆದ ಪ್ರಮುಖವಾದ ಮೂರು ಹಲ್ಲೆ-ಹೊಡೆದಾಟದ ಪ್ರಕರಣಗಳು ಸ್ವಲ್ಪ ವಿಚಾರ ಯೋಗ್ಯವಾಗಿವೆ.

ಭಾರತ್ ರೈಸ್ ಮಿಲ್ ಬಳಿ ಬಾಲಾಜಿ ಎಂಬ ಡ್ರೈವರ್‌ನಿಗೂ ಅಲ್ಲಿನ ಹಾಲಿನ ಡೈರಿಯವರಿಗೂ ಮಾತಿಗೆ ಮಾತಾಗಿ ಆತನನ್ನು ತೀವ್ರವಾಗಿ ಥಳಿಸಲಾಯಿತೆಂದು ಸುದ್ದಿ. ಈ ಹಲ್ಲೆಯ ಅಮಾನುಷತೆ ಕಂಡು ಒಂದೆಡೆ ಸಭ್ಯ ಜನ ತಲ್ಲಣಿಸಿ ಹೋದರೆ ಇನ್ನೊಂದೆಡೆ ಸ್ಥಳೀಯ ಬಡ ಜನರು ರೊಚ್ಚಿಗೆದ್ದು, ಕಡೆಗೆ ಬೆಳಗಿನ ಜಾವ ಆ ಪ್ರದೇಶದಲ್ಲಿ ಪೋಲೀಸ್ ಕಾವಲು ಹಾಕಬೇಕಾಯಿತೆನ್ನಲಾಗಿದೆ.

ಆತ ತೀವ್ರ ಕುಡಿದ ಮತ್ತಿನಲ್ಲಿತನ್ನನ್ನು ಕುರಿತು ಅವಾಚ್ಯವಾಗಿ ಮತ್ತು ಸುಳ್ಳು-ಸುಳ್ಳಾಗಿ ಕೂಗಾಡಿದ್ದಲ್ಲದೆ ಹಲ್ಲೆಯನ್ನೂ ನಡೆಸಿದ್ದರಿಂದ ಈ ಹೊಡೆದಾಟವಾಯಿತೆಂದು ಡೈರಿಯವರ ಹೇಳಿಕೆಯಾದರೆ, ಕುಡಿದಿದ್ದ ಆತನನ್ನು ಕೆಣಕಲಾಯಿತು, ಆಗ ಆತ ಆಡಿದ ಮಾತಿನಿಂದ ಕೋಪಗೊಂಡ ಇವರು ಪುನಃ ಆತನ ದಾರಿ ಕಾದು ಹಲ್ಲೆ ನಡೆಸಿದರು ಹಾಗೂ ಅನಂತರ ಠಾಣೆಯಲ್ಲೂ ಆತನಿಗೆ ಮರುದಿನ ಥಳಿಸಲಾಯಿತು ಎಂದು ಪ್ರತ್ಯಕ್ಷದರ್ಶಿಗಳೆನ್ನಲಾಗಿರುವವರು ಹೇಳುತ್ತಾರೆ. ಅಂತೂ ಆತನಿಗೆ ಥಳಿತವಂತೂ ಅಮಾನುಷ ರೀತಿಯಲ್ಲಿ ಆಗಿದೆ ಎಂದು ಅಲ್ಲಿನ ನಿವಾಸಿಗಳ ಹೇಳಿಕೆ.

ಸೆ. 11 ರ ಭಾನುವಾರ ಸಂತೆಯ ದಿನ ಸಂಜೆ 6 ಗಂಟೆ ಸುಮಾರಿಗೆ ಪತ್ನಿಯೊಂದಿಗೆ ಸಂತೆಗೆ ಬಂದಿದ್ದ ನಾಗರಾಜ ಎಂಬ ಯುವಕ – ಈತ ಹರಿಹರಪುರದ ಬಿ. ಎಂ. ರಘುನಾಥ್‌ರವರಲ್ಲಿ ಕೆಲಸ ಮಾಡುವವ ಎನ್ನಲಾಗಿದೆ – ಮಾವಿನಹಣ್ಣಿನ ಧಾರಣೆ ವಿಚಾರಿಸುವಾಗ ಅಲ್ಲೂ ಸಹ ಮಾತಿಗೆ ಮಾತಾಗಿ ಕ್ಷಣಾರ್ಧದಲ್ಲಿ ಆತನ ಮೇಲೆ ಹಲ್ಲೆ ನಡೆಯಿತೆನ್ನಲಾಗಿದೆ. ಇದನ್ನು ನೋಡಿದ ಸುತ್ತಮುತ್ತಲ ಹತ್ತಿಪ್ಪತ್ತು ಜನರು ಹಲ್ಲೆ ಮಾಡಿದವರೊಂದಿಗೆ ಜಗಳ ಮಾಡಿದರೆಂದೂ ಸುದ್ದಿ.

ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂಥ ಪೆಟ್ಟೇನೂ ಆಗಿರಲಿಲ್ಲ, ಆದರೆ ಎದೆನೋವು ಎಂದು ಜೋರಾಗಿ ಕೂಗುತ್ತಿದ್ದ ಎಂದು ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳ ಹೇಳಿಕೆ. ಠಾಣೆಯಲ್ಲಿ ಪ್ರಕರಣ ದಾಖಲಾಗಿ, ಜಾನ್, ಲಿಯೊ, ರಘು, ರಾಘವೇಂದ್ರ ಮತ್ತು ದಾಮೋದರ್ ಎಂಬವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಅನಂತರ ರಾಜಿಯಲ್ಲಿ ಪರ್ಯವಸಾನವಾಯಿತೆಂದು ಸುದ್ದಿ.

ಆತ ವಿಪರೀತ ಕುಡಿದು ತೂರಾಡುತ್ತ ರೂಪಾಯಿಗೆ 8 ಹಣ್ಣು ಕೊಡಬೇಕೆಂದು ಒತ್ತಾಯಿಸಿ ಜಗಳ ತೆಗೆದುದಲ್ಲದೆ ಅಲ್ಲಿದ್ದ ಮಹಿಳೆಯರ ಮೇಲೆಲ್ಲಾ ತೂರಾಡತೊಡಗಿದಾಗ ಅದನ್ನು ತಪ್ಪಿಸಲು ಹೋದವರಿಗೇ ಹೊಡೆದುದರಿಂದ ಈ ಗಲಾಟೆಯಾಯಿತೆಂದು ಇನ್ನೊಂದು ಕಡೆಯವರ ಹೇಳಿಕೆ.

ಮೊದಲಿನ ಪ್ರಕರಣದಲ್ಲಿ ಕೇಸು ದಾಖಲಾಗಲಿಲ್ಲ. "ಎರಡು ಕಡೆಯವರೂ ಅಷ್ಟಷ್ಟು ಜನ ಬಂದು 'ಕೇಸು ಬೇಡ ಸಾರ್, ರಾಜಿಯಾಗುತ್ತೇವೆ' ಎಂದು ಹೇಳಿ, ಕಂಪ್ಲೇಂಟ್ ಕೊಡಲಿಲ್ಲ"ವೆಂದು ಇನ್‌ಚಾರ್ಜ್ ಠಾಣಾಧಿಕಾರಿಯಾಗಿರುವ ಎ. ಎಸ್.ಐ. ಮಂಜುನಾಥಯ್ಯ 'ಮುಂಜಾವು'ಗೆ ತಿಳಿಸಿದರು. ಆದರೆ ಕೆಲವು ಖ್ಯಾತ ಮಧ್ಯವರ್ತಿ "ಗಣ್ಯ"ರಿಂದಾಗಿ ಕೇಸಾಗಲಿಲ್ಲ; ಬಡಲಿಗೆ ಸಾಕಷ್ಟು ದುಡ್ಡು ಕೈ ಬಿಟ್ಟಿತು ಎಂಬುದು ಖಚಿತವಾದ ವರ್ತಮಾನ. ತಾನು ಹಣವನ್ನೂ ತೆಗೆದುಕೊಳ್ಳಲಿಲ್ಲ, ಯಾವುದೇ ಮಧ್ಯವರ್ತಿಗಳಿಗೂ ಅವಕಾಶ ಕೊಡುತ್ತಿಲ್ಲ ಎಂದು ಮಂಜುನಾಥಯ್ಯ ಹೇಳುತ್ತಾರೆ. ಹಾಗಾದರೆ ಡೈರಿಯವರ ಕೈಬಿಟ್ಟ ಹಣದ ವಿಲೆವಾರಿಯೆಂತು? ಎಂಬುದು ಯಾರಾದರೂ ಆಸಕ್ತಿಯಿದ್ದವರು ತನಿಖೆ ಮಾಡಬೇಕಾದ ವಿಚಾರ

ಈ ಎರಡೂ ಪ್ರಕರಣಗಳನ್ನು ಕುರಿತಂತೆ ಒಂದು ಮಾತನ್ನು ಮಾತ್ರ ಹೇಳಬೇಕಾಗುತ್ತದೆ. ಬಹುತೇಕ ಗಲಾಟೆಗಳು ಯಾರೋ ಕುಡಿದವರಿಂದ ಹಾರಿದ ಕಿಡಿಗಳಿಂದಲೇ ಉದ್ಭವಿಸುತ್ತವೆ. ಈ ದಿನಗಳಲ್ಲಿ, ಅದರಲ್ಲೂ ಸಂತೆಯಂಥ ದಿನಗಳಲ್ಲಂತೂ — **ಕುಡಿಯದವರು ಸಿಗುವುದೇ ಅಪರೂಪ.** ಆದರೆ ಹೀಗೆ ಗಲಾಟೆಗಳು ಹುಟ್ಟಿಕೊಂಡಾಗ ಸಂಬಂಧಪಟ್ಟವರು ಅಥವಾ ಸುತ್ತಮುತ್ತಲವರು ತಾವೇ ಬುದ್ಧಿ ಕಲಿಸಲು ಹೋಗುವುದರ ಬದಲು, ಗಲಾಟೆ ಮಾಡುವ ವ್ಯಕ್ತಿಯನ್ನು ಹಿಡಿದಿಟ್ಟು ತಕ್ಷಣ ಪೋಲೀಸರನ್ನು ಕರೆಸಿ ಅವರಿಗೊಪ್ಪಿಸಿ ದೂರು ಕೊಡಬೇಕು. ಇಲ್ಲವಾದರೆ ಪೋಲೀಸ್ ಇಲಾಖೆಯ ಅವಶ್ಯಕತೆಯೇ ಇಲ್ಲದೆ ಮಧ್ಯವರ್ತಿಗಳದೇ (ರಾಜಿಕಾರರು) ಆಳ್ವಿಕೆಯಾಗುತ್ತದೆ. ಆಗ ಊರಿನಲ್ಲಿ ಹೊಡೆದಾಟಗಳು ಆದಷ್ಟೂ ಇವರ 'ಆಳ್ವಿಕೆ' ಸುಭಿಕ್ಷವಾಗುವುದರಿಂದ ಊರು ಏನಾಗುತ್ತೆಂದು ಬಿಡಿಸಿ ಹೇಳಬೇಕಾಗಿಲ್ಲ ವಷ್ಟೆ?

ಇಲ್ಲಿ ಪ್ರಸ್ತಾಪಿಸುವ ಇನ್ನೊಂದು ಹೊಡೆದಾಟದ ಸರಮಾಲೆ ಪ್ರಕರಣ ಹೆಚ್ಚು ಗಂಭೀರ ಸ್ವರೂಪದ್ದಾಗಿದೆ. ಒಬ್ಬಳು ಕಾಲೇಜು ಹುಡುಗಿಯನ್ನು ಆಕೆಯ ಪ್ರಣಯಿಯೆನ್ನಲಾದ ಯುವಕ ಮತ್ತು ಆತನ ಸ್ನೇಹಿತರು ಸಾಮೂಹಿಕವಾಗಿ ಸವಿದರೆಂಬ ಕಾರಣಕ್ಕಾಗಿ ಈ ಹೊಡೆದಾಟಗಳ ಸರಮಾಲೆ ನಡೆಯುತ್ತಿದ್ದು, ಇದು ಇನ್ನೂ ಮುಗಿದಿಲ್ಲವೆನ್ನಲಾಗುತ್ತಿದೆ. ಕೊಪ್ಪ ವೀರಭದ್ರ ದೇವಸ್ಥಾನದ ರಥೋತ್ಸವ ಮತ್ತು ಸಾರ್ವೆ ರಥೋತ್ಸವಗಳಲ್ಲಿ ಹೊಡೆದಾಟಗಳು ನಡೆದಿವೆ. ದಾಸಮಠದ ರಥೋತ್ಸವದಂದೂ ಇದು ಮುಂದುವರಿಯುವ ಸುದ್ದಿಯಿತ್ತಾದರೂ ಯಾಕೋ ನಡೆದಿಲ್ಲ.

ಆದರೆ ಇನ್ನೂ ಮುಂದಕ್ಕೆ ಯಾರ್‍ಯಾರನ್ನೋ ಹೊಡೆಯಲಾಗುತ್ತದೆ ಎಂಬ ಸುದ್ದಿ ಇದೆ. ಇದರಲ್ಲಿ ಹೆಚ್ಚು ಆತಂಕಕ್ಕೆ ಕಾರಣವಾಗಿರುವ ಅಂಶವೆಂದರೆ, ಈಗ್ಗೆ 3 ವರ್ಷದ ಹಿಂದೆ ಒಂದು ವೈಯಕ್ತಿಕ ವಿವಾದದ ಹೊಡೆದಾಟ ಎರಡು ಜಾತಿಗಳ ನಡುವಿನ ಹೊಡೆದಾಟವಾಗಿ ಬೆಳೆದಿದ್ದು, ಈಗಿನ ಗಲಾಟೆ ಕೂಡ ಮುಖ್ಯವಾಗಿ ಈ ಎರಡು ಜಾತಿಗಳ ನಡುವಿನದೇ ಆಗಿರುವುದು.

ಇದನ್ನು ಪೋಲೀಸ್ ಇಲಾಖೆ ಸೂಕ್ತ ಗಾಂಭೀರ್ಯದಿಂದ ಪರಿಗಣಿಸಿ, ಎರಡೂ ಗುಂಪುಗಳನ್ನು ಶಾಂತಗೊಳಿಸಿ, ಸನ್ನಿವೇಶ ಪ್ರಕ್ಷುಬ್ಧವಾಗುತ್ತಾ ಹೋಗುವುದಕ್ಕೆ ಬಿಡದೆ ಆರಂಭದಲ್ಲೇ ಅದಕ್ಕೆ ತಡೆ ಹಾಕಬೇಕು.

(ಈ ಪ್ರಕರಣದಲ್ಲಿ ಹುಡುಗಿಯ ವಾರಸುದಾರರು ಆಕೆಯ ಭವಿಷ್ಯದ ಹಿತದೃಷ್ಟಿಯಿಂದ ಇದು ಗುಲ್ಲಾಗಬಾರದೆಂದು ಹೆಣಗಿದ್ದರಿಂದಾಗಿ ನಮ್ಮ ಪತ್ರಿಕೆ ಇದನ್ನು ಕೆದಕಲು ಹೋಗಿರಲಿಲ್ಲ. ಈಗಲೂ ಅದನ್ನು ಕೆದಕುವುದಾಗಲಿ, ಆ ನೆಪದಲ್ಲಿ ಅವರನ್ನು 'ಬ್ಲಾಕ್ ಮೇಲ್' ಮಾಡುವುದಾಗಲಿ ನಮ್ಮ ಉದ್ದೇಶವಲ್ಲ. ಇದಕ್ಕೆ ಸಂಬಂಧಪಟ್ಟಂತೆ ಗುಂಪು ಜಗಳ ಬೆಳೆಯುತ್ತಿರುವುದರಿಂದ ಮಾತ್ರ ಇದನ್ನು ಬರೆಯಬೇಕಾಗಿದೆ.)

ಈ ಗುಂಪುಗಳ ಯುವಕರಾದರೂ ಅಷ್ಟೆ-ತಮಗೆ ಅನ್ಯಾಯವಾಗಿದೆಯೆನ್ನಿಸಿದ್ದಲ್ಲಿ ಸೂಕ್ತ ರೀತಿಯಲ್ಲಿ ಕಾನೂನಿನ ಮೂಲಕ ಕ್ರಮ ಕೈಗೊಳ್ಳುವುದು ವಿವೇಕ. ಒಂದು ಅನ್ಯಾಯಕ್ಕೆ ಮತ್ತೊಂದು ಕಾನೂನು ಬಾಹಿರ ಕೃತ್ಯ ಖಂಡಿತಾ ಎಂದೂ ಮದ್ದಾಗಲಾರದು ಜೊತೆಗೆ ಅದರಿಂದ ನಿಮ್ಮ ಯಾವ ಹಿತವೂ ರಕ್ಷಣೆಯಾಗುವುದರ ಬದಲು ಅನರ್ಥಗಳ ಸರಮಾಲೆಯೇ ಉಂಟಾಗಬಹುದು.

ರಾಜಕೀಯ, ಜಾತೀಯ ಮತ್ತು ಹಣದಾಹಿ ಹಿತಾಸಕ್ತಿಗಳು ಈ ಜಗಳಕ್ಕೆ ಕಡ್ಡಿ ಹೆಟ್ಟಿ ಉಲ್ಬಣಗೊಳಿಸಲು ಯತ್ನಿಸುತ್ತಿರುವುದನ್ನು ಸಹ ಪೋಲೀಸ್ ಇಲಾಖೆ ಗಮನಿಸಬೇಕು.

ಸಂದರ್ಶನ : ಜಯಣ್ಣ

ಉದಯ್ ಜಾದೂಗಾರ್ —
ಯಕ್ಷಿಣಿಗಾರ, ಬಹುಮುಖ ಪ್ರತಿಭೆಯ ಕಲಾವಿದ

"ಮಾತನಾಡುವ ಬೊಂಬೆ" ಖ್ಯಾತಿಯ ಯಕ್ಷಿಣಿಗಾರ ಉದಯ್ ಜಾದೂಗಾರ್, ಕರ್ನಾಟಕದೊಳಗೂ ಹೊರಗೂ ಈಗಾಗಲೇ ಸಾಕಷ್ಟು ಪ್ರಸಿದ್ಧಿ ಗಳಿಸಿರುವವರು. ಎಲ್ಲ ಯಕ್ಷಿಣಿಗಾರರೂ ನಡೆಸುವ ಬಂಗಾಲಿ ಜಾದೂ ಜೊತೆಗೆ ಇವರು ಪ್ರದರ್ಶಿಸುವ 'ಅಮೆರಿಕನ್ ಶಾಡೊ ಪ್ಲೇ', ಮತ್ತು 'ಇಂಗ್ಲೆಂಡಿನ ಮಾತನಾಡುವ ಬೊಂಬೆ'ಗಳು ಬಹಳವಾಗಿ ಜನರನ್ನು ಆಕರ್ಷಿಸಿವೆ, ರಂಜಿಸಿವೆ. ಈ ಮೂರೂ ತರದ ಕಲೆಗಳನ್ನು ಪ್ರದರ್ಶಿಸುವ ಏಕೈಕ ವ್ಯಕ್ತಿ ಪ್ರಪಂಚದಲ್ಲಿ ಇವರೊಬ್ಬರೇ ಎಂದು ಇವರ ಪುಸ್ತಕಗಳಲ್ಲಿ ಹೇಳಲಾಗಿದೆ.

ಶಾಡೋ ಪ್ಲೇ ಎಂಬುದು – ಕೈ ಬೆರಳುಗಳ ಮತ್ತು ಮುಷ್ಟಿಯ ನೆರಳಿನಿಂದ ವಿವಿಧ ಆಕೃತಿಗಳನ್ನು ಹೊಮ್ಮಿಸುವಂಥದು (ಪುರೋಹಿತ, ಪಾರ್ಕಿನಲ್ಲಿ ಪ್ರೇಮಿಗಳು, ಹಾವು–ಮುಂಗುಸಿ, ಪ್ರಾಣಿಗಳು, ಇತ್ಯಾದಿ.) ಮಾತನಾಡುವ ಬೊಂಬೆಯಲ್ಲಿ ಬೊಂಬೆ ಮಾತಾಡಿದಂತೆ ಕಂಡರೂ ಅದನ್ನು ಇವರೇ– ಬಾಯಿ ತೆರೆಯದೆ ಗಂಟಲಿನಿಂದಲೇ ಹೊರಡಿಸುವ ಒಂದು ಅಪೂರ್ವಕಲೆ. ಮ್ಯಾಜಿಕ್‌ಗಳನ್ನು ಸಹ ಇವರು ಬಹಳ ಕಲಾತ್ಮಕವಾಗಿ ಮಾಡುತ್ತಾರೆ.

ಸರಳ ಯಕ್ಷಿಣಿ, ಅದ್ಭುತ ಮ್ಯಾಜಿಕ್, ಯಕ್ಷಿಣಿಗಾರನ ಪೋಲಿ ಕಥೆಗಳು ಎಂಬ ಪುಸ್ತಕಗಳನ್ನು ಬರೆದು ಪ್ರಕಟಿಸಿರುವ ಇವರ ಇನ್ನೂ ಎರಡು ಪುಸ್ತಕಗಳು 'ಇಂದ್ರಜಾಲ' ಮತ್ತು 'ಇನ್ನೂ ಮ್ಯಾಜಿಕ್' ಅಚ್ಚಿನಲ್ಲಿವೆ.

ಬಹುಮುಖ ಪ್ರತಿಭೆಯ ಉದಯ್ ಒಬ್ಬ ಉತ್ತಮ ಛಾಯಾ ಚಿತ್ರ ಗ್ರಾಹಕರೂ ಹೌದು. ಇದು ಅವರ ವಂಶವೃತ್ತಿ. ಮುಖದ ಫೋಟೋ ತೆಗೆಯುವುದರಲ್ಲಿ (Portraiture) ವಿಶೇಷ ಪರಿಣತಿ ಪಡೆದುಕೊಂಡಿದ್ದೇನೆಂದು ಅವರು ಹೇಳುವುದರಲ್ಲಿ ಏನೂ ಉತ್ಪ್ರೇಕ್ಷೆಯಿಲ್ಲವೆಂದು ಅವರ ಹತ್ತಿರ ಫೋಟೋ ತೆಗೆಸಿದವರಿಗೆಲ್ಲ ತಕ್ಷಣ ಅರಿವಾಗುತ್ತದೆ.

ಸಾಲದ್ದಕ್ಕೆ ಈಗ ಅವರು 'ಚಕ್ರಬಂಧ' ಎಂಬ ಕನ್ನಡ ಬಣ್ಣದ ಸಿನಿಮಾವನ್ನೂ ತಯಾರಿಸುತ್ತಿದ್ದು ಅವರೇ ಮುಖ್ಯ ಪಾತ್ರಧಾರಿ. ಖ್ಯಾತ ಯುವ ನಿರ್ದೇಶಕ ರಮೇಶ್ ಕಾಮತ್ ಇದರ ನಿರ್ದೇಶಕರು.

ಹೀಗೆ ಹಲವು ರಂಗಗಳಲ್ಲಿ ಪ್ರತಿಭಾವಂತರಾದ ಅವರು ಈಚೆಗೆ ಕೊಪ್ಪದಲ್ಲಿ ಮೊಕ್ಕಾಂ ಮಾಡಿ ತಮ್ಮ ಜಾದೂ ಪ್ರದರ್ಶನ ನೀಡಿದರು. ಈ ಸಂದರ್ಭದಲ್ಲಿ ಅವರ ಒಂದು ಕಿರು ಸಂದರ್ಶನಕ್ಕಾಗಿ ನಾವು ಜಲಜಾಕ್ಷಮ್ಮ ಕಲ್ಯಾಣ ಮಂಟಪಕ್ಕೆ ಹೋದಾಗ (ಸಂಜೆ ಸುಮಾರು 5 ಗಂಟೆ) ಅವರು ಮಾಮೂಲಿನಂತೆ ಇನ್ನೂ ಹಾಸಿಗೆಯ ಮೇಲಿದ್ದರು. ಪರಿಚಯ, ಉಭಯಕುಶಲೋಪರಿ ಆದ ನಂತರ 'ಒಂದ್ನಿಮಿಷದಲ್ಲಿ ಬಂದೆ' ಎಂದು ಒಳಗೆ ಹೋದವರು ಜಾದೂ ಮಾಡಿದ ಹಾಗೆ ಕ್ಷಣಾರ್ಧದಲ್ಲಿ ಮುಖ ತೊಳೆದು ಡ್ರೆಸ್ ಮಾಡಿಕೊಂಡು ಕ್ಯಾಮರಾ ತೂಗುಹಾಕಿಕೊಂಡು ಬಂದು ನಮ್ಮನ್ನು ದಂಗುಬಡಿಸಿದರು.

ನಮ್ಮ ಪ್ರಶ್ನೆಗಳಿಗೆ ಮೊದಲು ಅವರದೇ ಒಂದು ಪ್ರಶ್ನೆ: "ನಿಮ್ಮ ಸಂದರ್ಶನದ ಉದ್ದೇಶವೇನು?

'ಮುಂಜಾವು': ಈ ಊರಿಗೆ ಬರುವ ಕವಿ, ಸಾಹಿತಿ, ಕಲಾವಿದ ಮುಂತಾದ ಪ್ರತಿಭಾವಂತರನ್ನು ಸಂದರ್ಶಿಸಿ, ಅವರನ್ನು ಹಾಗೂ ಅವರ ಕಲೆ–ಪ್ರತಿಭೆಯನ್ನು ಸಂಕ್ಷಿಪ್ತವಾಗಿಯಾದರೂ ನಮ್ಮ ಓದುಗರಿಗೆ ಪರಿಚಯಿಸುವುದು ನಮ್ಮ ಪತ್ರಿಕೆಯ ಒಂದು 'ಸಂಪ್ರದಾಯ'.

ಉದಯ್: ತುಂಬಾ ಸಂತೋಷ. ಇದೇ ಆದರ್ಶವನ್ನು ಎಲ್ಲಾ ಊರುಗಳ ಪತ್ರಿಕೆಗಳೂ ಅನುಸರಿಸಿದರೆ ನಾಡಿನ ಮೂಲೆ–ಮೂಲೆಗಳಲ್ಲಿ ಎಲೆ–ಮರೆಯ ಕಾಯಿಯಂತಿರುವ ಎಷ್ಟೋ ಕಲಾವಿದರು ಬೆಳಕಿಗೆ ಬರಲು ಸಾಧ್ಯ.... ನಿಮ್ಮ ಪತ್ರಿಕೆ ನೂರ್ಕಾಲ ಬಾಳಲಿ!

ಉದಯ್ ಅವರ ಸ್ವಂತ ಸ್ಥಳ ಮಂಗಳೂರು, ಬೆಳೆದದ್ದೆಲ್ಲಾ ಶಿವಮೊಗ್ಗದಲ್ಲಿ. ಮಾತೃ ಭಾಷೆ ಕೊಂಕಣಿ. ವಿದ್ಯಾಭ್ಯಾಸ ಬಿ.ಕಾಂ. ಜೊತೆಗೆ ಎಂ.ಎಂ.ಎ. ಎಂದರೆ ಮಾಸ್ಟರ್ ಆಫ್ ಮ್ಯಾಜಿಕ್ ಆರ್ಟ್ಸ್. 'ಜಾದೂಗಾರ್' ಎಂಬುದು ಇವರೇ ತಮ್ಮ ಹೆಸರಿಗೆ ಸೇರಿಸಿಕೊಂಡ ಉಪನಾಮ. ಬೇರೆ ಹಲವು ಯಕ್ಷಿಣಿಗಾರರು 'ಪ್ರೊಫೆಸರ್' ಎಂದು ಸೇರಿಸಿಕೊಂಡ ಹಾಗೆ.

ಅವರು ವಿದ್ಯಾಭ್ಯಾಸದ ನಂತರ ಬೇರೆ ಉದ್ಯೋಗಕ್ಕೆ ಹೋಗಬಹುದಿತ್ತಲ್ಲ?

ಉದಯ್: ಹೋಗಬಹುದಿತ್ತು. ಆದರೆ ನನಗೆ ಸ್ವಂತ ವೃತ್ತಿ ಬೇಕಾಗಿತ್ತು. ಜೊತೆಗೆ ಈ ಜಾದೂ ವೃತ್ತಿ ಮೆಚ್ಚಿಗೆಯಾಗಿತ್ತು.

ಮುಂಜಾವು: ಅಂದರೆ ಈ ವೃತ್ತಿಯನ್ನು ಸ್ವಇಚ್ಛೆಯಿಂದ ಆರಿಸಿಕೊಳ್ಳುವಲ್ಲಿ ಏನಾದರೂ ಹಿನ್ನೆಲೆ ಇದೆಯೆ?

ಉದಯ್: ಹೌದು ನಾನು ಓದುತ್ತಿರುವಾಗ "ಒಡೆಯ" ಅನ್ನುವ ವ್ಯಕ್ತಿಯ ಮ್ಯಾಜಿಕ್‌ಗಳ ಪ್ರಭಾವ ಇತ್ತು. ನಮ್ಮ ತಂದೆಯವರೂ (ರಮೇಶರಾವ್) ಕೆಲವು ಯಕ್ಷಿಣಿ ವಿದ್ಯೆಗಳನ್ನು ಕಲಿತಿದ್ದರು. ಅವರ ಪ್ರಭಾವ ಕೂಡಾ ಇದೆ ಅಂತ ಹೇಳಬಹುದು

ಮುಂಜಾವು: ನಿಮ್ಮ ಯಕ್ಷಿಣಿ ಕಲೆಗೂ ಬಾಬಾಗಳ ಮಂತ್ರ ಶಕ್ತಿಗೂ ವ್ಯತ್ಯಾಸ ಇದೆಯೆ?

ಉದಯ್: ವ್ಯತ್ಯಾಸ ಏನೂ ಇಲ್ಲ. ನಾವು ಯಕ್ಷಿಣಿ ಅಂತೀವಿ. ಬಾಬಾಗಳು ಪವಾಡ ಅಂತಾರೆ ಅಷ್ಟೆ. ನಿಜವಾಗಲೂ ಅದು ಮಂತ್ರಶಕ್ತಿ ಅಲ್ಲ.

ಮುಂಜಾವು: ನಿಮ್ಮ ಈ ವೃತ್ತಿಯಿಂದ ಸಮಾಜಕ್ಕೆ ಉಪಯುಕ್ತವಾದ ಕೊಡುಗೆ ಅಥವಾ ಸಂದೇಶ ಏನಾದರೂ ಇದೆಯೇ?

ಉದಯ್: ಉಪಯುಕ್ತವಾದ ಕೊಡುಗೆ ಅಂತ ಏನಿಲ್ಲ. ಈ ವೃತ್ತಿ ಇರುವುದು ಮನರಂಜನೆಗಾಗಿ ಮಾತ್ರ. ಬಾಬಾಗಳು ಮಾಡುವಂಥವನ್ನೇ ನಾವು ಮಾಡುವುದನ್ನು ನೋಡಿದ ಜನ "ಬಾಬಾಗಳದೂ ಸಹ ಮಂತ್ರ ಶಕ್ತಿಯಾಗಲಿ, ದೇವತಾಶಕ್ತಿಯಾಗಲಿ ಅಲ್ಲ." ಎಂಬುದನ್ನು ತಿಳಿದುಕೊಂಡರೆ ಅದೇ ಸಂದೇಶ.

ಮುಂಜಾವು: 'ಪವಾಡ ಪುರುಷರು' ಎಂದುಕೊಳ್ಳುವವರ ಬಗ್ಗೆ ಏನ್ಹೇಳ್ತೀರಿ?

ಉದಯ್: ಜನರ ಮೂಢನಂಬಿಕೆಯನ್ನು ಬಳಸಿಕೊಂಡು ಪವಾಡ ಅಂತ್ಹೇಳಿ ಮುಗ್ಧ ಜನರನ್ನು ಹಾಳು ಮಾಡುತ್ತಾ ಇವರು ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುತ್ತಿದ್ದಾರೆ ಅಂತ ಹೇಳಬಹುದು.

ಮುಂಜಾವು: ನೀವು ನಿಮ್ಮ ಪ್ರದರ್ಶನಗಳ ನಡುವೆ ಈ ಬಗ್ಗೆ ಜನರಿಗೆ ಸ್ವಲ್ಪ ಬಿಡಿಸಿ ಹೇಳಬಹುದಲ್ಲ–ಉದಾಹರಣೆಗೆ ಮೈಸೂರು ನಾಗೇಶ್ ಮುಂತಾದವರು ಮಾಡಿದ ಹಾಗೆ?

ಉದಯ್: ['ಅವರು ಚೆನ್ನಾಗಿದ್ದಾರೋ ನಾನು ಚೆನ್ನಾಗಿದ್ದೇನೋ?' (ಸಂಪಾದನೆಯಲ್ಲಿ) ಎಂದು ತಗ್ಗಿದ ಧ್ವನಿಯಲ್ಲಿ ಕೇಳಿ] ಕೆಲವು ಕಡೆ ಹಾಗೆ ಹೇಳಿದರೆ ಈ ಪವಾಡಿಗರ ಶಿಷ್ಯರು ದೈಹಿಕವಾಗಿ ಹಲ್ಲೆಗೇ ಬರುತ್ತಾರೆ. ಅದಕ್ಕಿಂತ ಜನ ಕಣ್ಣಾರೆ ನೋಡಿ ಎಷ್ಟು ಅರ್ಥ ಮಾಡಿಕೊಳ್ಳುತ್ತಾರೋ ಸದ್ಯಕ್ಕೆ ಅಷ್ಟೆ ಸಾಕು.

ಮುಂಜಾವು: "ನೀವು ಮಾಡುವುದು ಪವಾಡ ಅಲ್ಲ, ಯಕ್ಷಿಣಿ ಕಲೆ–ಕೈಚಳಕ" ಅಂತ್ಹೇಳಿ ಅವರುಗಳಿಗೆ ಬಹಿರಂಗ ಸವಾಲು ಹಾಕಿದರೆ?

ಉದಯ್: ಸವಾಲು ಹಾಕಿದ್ದೀವಿ. ಈ ಕ್ಷಣದಲ್ಲಿ ಬೇಕಾದರೂ ಹಾಕ್ತೀವಿ. ಆದರೆ ಅವರು ನಮ್ಮ ಸವಾಲನ್ನು ಸ್ವೀಕರಿಸುವುದಿಲ್ಲ. ಅವರ ಮಂದಿರ (ಆಶ್ರಮ)ದೊಳಕ್ಕೆ ನಮ್ಮನ್ನು ಬಿಟ್ಕೊಳ್ಳೋದಿಲ್ಲ. ಬಲವಂತವಾಗಿ ಹೋದರೆ, ಅವರ ಗೂಂಡಾ ಶಿಷ್ಯರು ದೈಹಿಕವಾಗಿ ಮಟ್ಟ ಹಾಕಲು ತಯಾರಿದ್ದಾರೆ.

ಮುಂಜಾವು: ಕಾನೂನಿನ ನೆರವು ಪಡೆಯಬಹುದಲ್ಲವೆ?

ಉದಯ್: ಕಾನೂನಿನ ನೆರವು ಅನ್ನುವುದು ಕೇವಲ ಪತ್ರಿಕೆಗಳಲ್ಲಿ ಪ್ರಚಾರ ಪಡೆಯುತ್ತದೆ, ಅಷ್ಟೆ ಹೊರತು ನಿಜವಾಗಿಯೂ ನಮ್ಮ ನೆರವಿಗೆ ಬರುವುದಿಲ್ಲ. ದೊಡ್ಡ ದೊಡ್ಡ ರಾಜಕಾರಣಿಗಳು, ಪುಢಾರಿಗಳು, ನ್ಯಾಯಾಂಗದವರು, ಕಾರ್ಯಾಂಗದವರು ಮುಂತಾದವರೇ ಬಾಬಾಗಳ ಭಕ್ತರಾಗಿರುವಾಗ ಕಾನೂನು ನಮ್ಮ ಪರವಾಗಿ ಕೆಲಸ ಮಾಡುವುದಿಲ್ಲ. ನಿಮಗೂ ಗೊತ್ತು, ಜನಗಳಿಗೂ ಗೊತ್ತು–ಸರಕಾರವೇ ಪವಾಡ ಪುರುಷರನ್ನು ಕರೆಸಿ ಮಳೆಗಾಗಿ ಪೂಜೆ–ಜಪ ಮಾಡಿಸ್ತಾರೆ. ಹಾಗೆ ಮಾಡಿದರೂ ಮಳೆಗಾಲದಲ್ಲಿ ಸಹ ಮಳೆ ಬರಲಿಲ್ಲ. ಅನುಭವ ಆದರೂ ನಮ್ಮ ಜನಗಳು ಅವರನ್ನೇ ಆಶ್ರಯಿಸ್ತಿದಾರೆ.

ಮುಂಜಾವು: ಡಾ|| ಕೋವೂರ್, ಡಾ|| ನರಸಿಂಹಯ್ಯನವರ ಬಗ್ಗೆ....?

ಉದಯ್: ಅವರೆಲ್ಲಾ ದೊಡ್ಡ ದೊಡ್ಡ ಬುದ್ಧಿ ಜೀವಿಗಳು, ವಿಚಾರವಾದಿಗಳು. ಮೂಢನಂಬಿಕೆ, 'ಪವಾಡ'ಗಳ ವಿರುದ್ಧ ಎಡೆಬಿಡದೆ ಹೋರಾಡಿದವರು.

ಡಾ|| ಕೋವೂರ್ ಒಂದು ಸಾರಿ ನಮ್ಮನ್ನೆಲ್ಲಾ ಸೇರಿಸಿಕೊಂಡು ಒಂದು ಸಮಿತಿ ರಚಿಸಿ ಮೂಢನಂಬಿಕೆ, ಪವಾಡಗಳ ವಿರುದ್ಧ ಕೆಲಸ ಮಾಡಬೇಕೆಂದು ಹೇಳಿ ಕಳುಹಿಸಿದ್ದರು. ಆದರೆ ಕಾರಣಾಂತರದಿಂದ ಅಗ ಹೋಗುವುದಕ್ಕಾಗಿರಲಿಲ್ಲ. ಈಗ ಜನಗಳು ಎಚ್ಚರವಾಗ್ತಿದಾರೆ. ಪವಾಡ ಅನ್ನುವುದು ಸಹ ಕಡಿಮೆಯಾಗಿದೆ.

ನಮ್ಮ ಮಾತು ಅವರ ಪ್ರದರ್ಶನದ ಕಡೆ ಹೊರಳಿತು.

ಮುಂಜಾವು: ನಿಮ್ಮ ಪ್ರದರ್ಶನಗಳಲ್ಲಿ ನೀವು ಬಳಸುವ ಭಾಷೆ ಸ್ವಲ್ಪ ಅಶ್ಲೀಲವಾಯಿತು ಎನ್ನಿಸುವುದಿಲ್ಲವೆ? [illegible] ಗಂಭೀರ ಹಾಸ್ಯದ, ಚುರುಕಿನ ಪ್ರಶ್ನೆಗಳು ಬೊಂಬೆಯನ್ನು ಕುರಿತು ಬರುವುದು ಕಾಣುವುದಿಲ್ಲವಲ್ಲ. ತೀರ್ಥಹಳ್ಳಿಯಲ್ಲಿ 4 ವರ್ಷದ ಹಿಂದೆ ಸ್ವಲ್ಪ ಗಲಾಟೆ ಬೇರೆ ಆಯಿತು ಎಂದು ವರದಿಯಾಗಿತ್ತು?

ಉದಯ್: ಹೇಗೆ ಅಶ್ಲೀಲ ಎನ್ನುತ್ತೀರಿ? ನಮ್ಮ ಪ್ರದರ್ಶನ ಮನರಂಜನೆಗಾಗಿ ಎಂದು ಮೊದಲೇ ಹೇಳಿದೆ. ಜನ ಈ ಹಾಸ್ಯಕ್ಕೇ ಚೆನ್ನಾಗಿ ನಗುತ್ತಾರಲ್ಲ? ನನ್ನ 'ಮಗ' ಹ್ಯಾರಿ ಅವನಮ್ಮನನ್ನು ನಾನು ಮದುವೆಯಾದುದಕ್ಕೆ ಪ್ರತಿಯಾಗಿ ತಾನು ನನ್ನಮ್ಮನನ್ನು ಮದುವೆಯಾಗುತ್ತೇನೆನ್ನುವುದು ಒಂದು ಚುರುಕಿನ ಹಾಸ್ಯ ಅಲ್ಲವೆ? (ಇನ್ನೂ ಕೆಲವು ಉದಾಹರಣೆಗಳನ್ನು ಕೊಟ್ಟರು)

ಇನ್ನೂ ಗಂಭೀರ ಹಾಸ್ಯದ ಪ್ರಶ್ನೆಗಳನ್ನು, ಮಾತುಗಳನ್ನು ಬಳಸಿ ನೋಡಿದ್ದೇನೆ. ಆದರೆ ಸಾಮಾನ್ಯ ಜನ ಅವನ್ನು ಅರ್ಥ ಮಾಡಿಕೊಂಡು ನಗಬೇಕಲ್ಲವೆ? (ನನ್ನ ಹೊಟ್ಟೆಪಾಡೂ ಸಾಗಬೇಕಲ್ಲವೆ?)

ಖ್ಯಾತ ಹಾಸ್ಯಸಾಹಿತಿಗಳಾದ ಬೀಚಿ, ಯೋಗಾನರಸಿಂಹ, ಆರ್. ಡಿ. ಕಾಮತ್ ಇವರುಗಳನ್ನೇ ಕೇಳಿದ್ದೇನೆ–ನನ್ನ ಪ್ರದರ್ಶನವನ್ನು ಇನ್ನೂ ಹಾಸ್ಯಭರಿತವಾಗಿ ಸುಧಾರಣೆ ಮಾಡುವುದು ಹೇಗೆಂದು. ಅವರೆಲ್ಲ ಪ್ರದರ್ಶನ ನೋಡಿ ಇದೇ ಸರಿ, ಇಷ್ಟು ಸಾಕು; ಜನ ಬೇಕಾದಷ್ಟು ನಗುತ್ತಿದ್ದಾರಲ್ಲಯ್ಯ. ಇನ್ನೇನು ಬೇಕು?–ಎಂದಿದ್ದಾರೆ.

ತೀರ್ಥಹಳ್ಳಿಯಲ್ಲಿ ಗಲಾಟೆಯಾಗಲಿಲ್ಲ. ಜಾಹೀರಾತು ಮಾತಾಡಿದ್ದಕ್ಕಿಂತಲೂ– ನಮ್ಮ ಕಲೆಕ್ಷನ್ ನೋಡಿ ಇನ್ನೂ ಸಾವಿರ ಸಾವಿರ ರೂಪಾಯಿ ಕೇಳಿದರು. ಕೊಡದಿದ್ದುದಕ್ಕೆ ಸ್ವಲ್ಪ ರಂಪವನ್ನೂ ಮಾಡಿ ವರದಿಯನ್ನೂ ಮಾಡಿದರು ಅಷ್ಟೇ.

ಇನ್ನು "ನಿನ್ನ ತಂಗಿ ಇದ್ದಾಳಾ?", "ಕುಡಿದುಕೊಂಡು ಬಂದಿದ್ದೀಯಾ?" ಮುಂತಾದ ಮಾತುಗಳನ್ನು ಹ್ಯಾರಿ ಆಡುವಾಗ ಆ ಪ್ರಶ್ನೆಗಳನ್ನು ನನ್ನ ಸಹಾಯಕರಲ್ಲೇ ಒಬ್ಬರು ಕೇಳುತ್ತಾರೆ ಏಕೆಂದರೆ ನನ್ನ

(3ನೇ ಪುಟಕ್ಕೆ)

ಓದುಗರ ಪುಟ

ಮಲೆನಾಡಿಗೆ ರೇಷ್ಮೆ ನಿರುಪಯುಕ್ತವೆ ? — ಒಂದು ವಿವೇಚನೆ

ಮಾನ್ಯರೆ,

'ಮಲೆನಾಡಿಗೆ ರೇಷ್ಮೆ ಬೆಳೆ ನಿರುಪಯುಕ್ತ' ಎಂಬ ಸಚಿವ ಗೋವಿಂದ ಗೌಡರ ಅನ್ನಿಸಿಕೆ ('ಮುಂಜಾವು' – 30.3.86) ಮತ್ತು ಇದಕ್ಕೆ ಇಲಾಖೆಯ ಹಿರಿಯ ಅಧಿಕಾರಿಗಳ ಸ್ಪಷ್ಟನೆ ('ಮುಂಜಾವು' – 27.4.86) ಓದಿ, ನನ್ನ ಅನುಭವದಿಂದ ಕೆಲವು ವಿಚಾರಗಳನ್ನು ಬರೆಯುತ್ತಿದ್ದೇನೆ. ನಾನೂ 2 ವರ್ಷ ರೇಷ್ಮೆ ಬೆಳೆ ಬೆಳೆದು ಈಗ್ಗೆ 2–3 ವರ್ಷದಿಂದ ಅದನ್ನು ಕೈ ಬಿಟ್ಟವನು.

1) ರೇಷ್ಮೆ ಮಲೆನಾಡಿನಲ್ಲಿ ಇಲಾಖೆಯವರು ಹೇಳುವಷ್ಟು ಲಾಭದಾಯಕವಲ್ಲ. (ಅವರು ಅಧಿಕೃತವಾಗಿ ಎಕರೆಗೆ 1 ವರ್ಷಕ್ಕೆ ಏಳೆಂಟು ಸಾವಿರ ರೂ- ನಿವ್ವಳ ಲಾಭ ಎಂದು ಹೇಳಿದರೂ ಬೇರೆ ಸಂದರ್ಭಗಳಲ್ಲಿ 25 ಸಾವಿರದವರೆಗೂ ಹೇಳುತ್ತಾರೆ.)

ಇದಕ್ಕೆ ಕಾರಣಗಳೆಂದರೆ, ಇಲ್ಲಿ ಕೆಲಸಕ್ಕೆ ಸಾಕಷ್ಟು ಜನವೂ ಸಿಗುವುದಿಲ್ಲ. ಕೂಲಿಯ ದರವೂ ಹೆಚ್ಚು. ಈ ಬೆಳೆಗೆ ವೈಯುಕ್ತಿಕ ಗಮನ ಅಗತ್ಯ. ತೋಟದ ಬೇರೆ ಆರ್ಥಿಕ ಬೆಳೆಗಳಂತೆ ನಾಲ್ಕರ ಜೊತೆಗೆ ಐದನೆಯದಾಗಿ ಬೆಳೆಯಲು ಬರುವಂಥದಲ್ಲ.

ಆದ್ದರಿಂದ ಇದನ್ನೊಂದು ಉಪ ಆರ್ಥಿಕ ಬೆಳೆಯಾಗಿ ಬೆಳೆಯಲು ಆಗುವುದಿಲ್ಲ. ಅದನ್ನೇ ಮುಖ್ಯ ಬೆಳೆಯಾಗಿ ಬೆಳೆಯಬೇಕು. ಅಂದರೆ ಅಲ್ಪ ಸ್ವಲ್ಪ ಜಮೀನಿದ್ದು, ಬೇರೆ ಆರ್ಥಿಕ ಬೆಳೆಗಳಿಲ್ಲದೆ, ಮನೆಯವರೇ ಕೆಲಸ ಮಾಡುವುದಾದರೆ ಮಾತ್ರ ಇದು ಲಾಭದಾಯಕವಾಗಬಹುದು.

2) ಮಲೆನಾಡಿಗೆ ಹತ್ತಿರದಲ್ಲೆಲ್ಲೂ ರೇಷ್ಮೆಗೆ ಯೋಗ್ಯವಾದ ಮಾರುಕಟ್ಟೆ ಸೌಲಭ್ಯವಿಲ್ಲ. ಶಿವಮೊಗ್ಗ, ಹಾಸನಗಳಲ್ಲಿ ಬೃಹತ್ತಾದ ಮಾರುಕಟ್ಟೆ ಪ್ರಾಂಗಣಗಳನ್ನು ಕಟ್ಟಿಸಿದ್ದಾರಾದರೂ ಅಲ್ಲಿ ಕೇವಲ ನಾಲ್ಕೈದು ಜನ ವ್ಯಾಪಾರಿಗಳು ಮಾತ್ರ ಬರುವುದರಿಂದ ಒಳ್ಳೆಯ ಬೆಲೆ ಬರುವುದಿಲ್ಲ. ರಾಮನಗರ ದೂರ ಮಾತ್ರವಲ್ಲ, ಸರಿಯಾದ ಸಾರಿಗೆ ಸೌಕರ್ಯವೂ ಇಲ್ಲ. ಸಾಲದ್ದಕ್ಕೆ ಅಲ್ಲಿ ತೂಕದಲ್ಲಿ ಬಹಳ ಮೋಸ ನಡೆಯುತ್ತದೆ. ಹಣ ಆಯಾ ದಿನವೇ ಪಾವತಿಯಾಗುತ್ತಾದರೂ ಬೇಗ ಸಿಗುವುದಿಲ್ಲ. ಒಂದು ದಿನ ಉಳಿದುಕೊಳ್ಳಲೇಬೇಕಾಗುತ್ತದೆ. ಹೀಗಾಗಿ ಖರ್ಚು ದುಬಾರಿಯಾಗುತ್ತದೆ.

3) ಹುಳುಗಳನ್ನು ಮೊದಲ 10–12 ದಿನ ತಾವೇ ಬೆಳೆಸಿಕೊಡುವುದಾಗಿ ಇಲಾಖೆಯವರು ಹೇಳುತ್ತಾರೆ. ಆದರೆ ಇದರಿಂದ ರೈತರ ಶ್ರಮವೇನೂ ಗಣನೀಯವಾಗಿ ಕಮ್ಮಿಯಾಗುವುದಿಲ್ಲ. ಏಕೆಂದರೆ ಹುಳುವಿನ 30 ದಿನದ ಒಟ್ಟು ಅವಧಿಯಲ್ಲಿ ಕೊನೆಯ ಹತ್ತು ದಿನಗಳಲ್ಲೇ ಅತಿ ಹೆಚ್ಚು ಕೆಲಸ ಇರುವುದು.)

ಅಲ್ಲದೆ ಮೊದಲ ಹತ್ತು ದಿನ ಕೆಲಸ ಕಮ್ಮಿಯಾದರೂ ಬಹಳ ಸೂಕ್ಷ್ಮವಾಗಿ ಬೆಳೆಸಿದರೆ ಮಾತ್ರ ಬೆಳೆ ಚೆನ್ನಾಗುವುದು. ಇದು ಚಾಕಿ ಸಾಕಾಣಿಕೆ ಕೇಂದ್ರದಲ್ಲಿ ನೋಡಿಕೊಳ್ಳುವವರ ಆಸಕ್ತಿ–ಅನಾಸಕ್ತಿಯನ್ನು ಹೊಂದಿಕೊಂಡಿರುತ್ತದೆ. (ಅಂದರೆ ಅವರು ರೈತರ ಶ್ರಮ ಕಮ್ಮಿ ಮಾಡಿದ್ದಕ್ಕಿಂತ ಮುಂದೆ ಆಗುವ ನಷ್ಟವೇ ಹೆಚ್ಚು ಗಣನೀಯವಾಗಬಹುದು.)

4) ಬೆಳೆಗಾರರಿಗೂ ರೇಷ್ಮೆ ಉದ್ಯಮಕ್ಕೂ ನಿಜವಾದ ಕೊಂಡಿಯೆಂದರೆ ನೂಲು ತೆಗೆಯುವವರು (ರೀಲರುಗಳು.) ಇವರಿಗೆ

(4ನೇ ಪುಟಕ್ಕೆ)

ಮನರಂಜನೆಯೋ, ದೈಹಿಕ ವೇದನೆಯೋ?

ಕೊಪ್ಪಾದ ಪ್ರಮುಖ ಮನರಂಜನಾ ಸಾಧನವಾಗಿರುವ ಚಿತ್ರಮಂದಿರದ ಬಗ್ಗೆ ಕೆಲವು ಅಂಶಗಳನ್ನು ಹೇಳಲೇಬೇಕಾಗಿದೆ. ಚಿತ್ರಮಂದಿರದಲ್ಲಿ ವಾತಾಯನ ವ್ಯವಸ್ಥೆ (ವೆಂಟಿಲೇಶನ್) ತೀರಾ ಹದಗೆಟ್ಟಿದ್ದು ಒಳಗಿನ ಬಿಸಿಗಾಳಿಯನ್ನು ಹೊರಗೆ ಸಾಗಿಸುವ ಎಗ್ಸಾಸ್ಟ್ ಫ್ಯಾನ್‌ಗಳು ಯಾವುದೂ ಕೆಲಸ ಮಾಡುತ್ತಿಲ್ಲ. ಕಾರಣ ವಿದ್ಯುತ್ ಸಂಪರ್ಕ ನಿಲ್ಲದಿರುವುದೋ ಅಥವಾ ದುರಸ್ತಿ ಮಾಡದಿರುವುದೋ ತಿಳಿದಿಲ್ಲ. ಹೀಗಾಗಿ ಚಿತ್ರಮಂದಿರದ ಒಳಗೆ ಅಸಹನೀಯ ಸೆಕೆ. ಸಾಲದ್ದಕ್ಕೆ ವಿದ್ಯುತ್ ಮಿತ ಬಳಕೆಗಾಗಿ ಫ್ಯಾನ್‌ಗಳ ಬಳಕೆಯಲ್ಲಿ ತೀವ್ರ ಕಡಿತ. ಇದರಿಂದಾಗಿ ಸೆಕೆಗಾಲದ ಈ ತುತ್ತ ತುದಿಯಲ್ಲಿ, ಮನರಂಜನೆಯ ಬದಲು ಒಳಗೆ ಬೇಯುವಂತಾಗುತ್ತದೆ. ವಿದ್ಯುತ್ ಬಳಕೆಯನ್ನು ಈ ರೀತಿ ಮಿತಗೊಳಿಸುವ ಬದಲು, ಕಡೇಪಕ್ಷ ಬೇಸಿಗೆಯಲ್ಲಾದರೂ, ಪ್ರದರ್ಶನದ ಸಂಖ್ಯೆಯನ್ನು ಕಮ್ಮಿ ಮಾಡಿ, ಕನಿಷ್ಠ ಫ್ಯಾನ್‌ಗಳನ್ನಾದರೂ ಹಾಕಬಾರದೆ?

ಇನ್ನು ಚಿತ್ರಮಂದಿರದ ಒಳಗೆ ಧೂಮಪಾನಕ್ಕೆ ಯಾವುದೇ ನಿರ್ಬಂಧ ಇದ್ದಂತಿಲ್ಲ. "ಧೂಮಪಾನ ನಿಷೇಧಿಸಿದೆ" ಎಂಬುದನ್ನು ಪರದೆಯ ಮೇಲೆ ತೋರಿಸುವುದು ಕಾನೂನಿನ ಕಣ್ಣನ್ನು ಕಟ್ಟುತ್ತದೆಯೇ ಹೊರತ, ಜನರ ಬಾಯನ್ನಂತೂ ಖಂಡಿತಾ ಅಲ್ಲ.

ಇನ್ನು ಆಸನ ವ್ಯವಸ್ಥೆಯ ಬಗ್ಗೆ ಏನೂ ಹೇಳದಿರುವುದೇ ಒಳಿತು. ಇತ್ತೀಚೆಗೆ ನನ್ನ ಸ್ನೇಹಿತನೊಬ್ಬ ಇಲ್ಲಿ ಪ್ಯಾಂಟನ್ನು ಹರಿದುಕೊಂಡಿರುವುದು ಈ ವ್ಯವಸ್ಥೆಯ ದಕ್ಷತೆಯನ್ನು ಎತ್ತಿ ಹೇಳುತ್ತದೆ.

"ಬಾಲ್ಕನಿ" ಎಂದು ಹೆಚ್ಚು ಹಣ ತೆತ್ತು ಹೋಗುವವರಿಗಂತೂ ಸಿಗುವುದು ಅಧಿಕ ಪ್ರಮಾಣದ ಹೊಗೆ ಹಾಗೂ ಬಿಸಿಗಾಳಿ ಮಾತ್ರ.

ಇಷ್ಟು ದೊಡ್ಡ ತಾಲ್ಲೂಕು ಕೇಂದ್ರದಲ್ಲಿರುವ ಈ ಒಂದೇ ಒಂದು ಚಿತ್ರಮಂದಿರದ ಮಾಲೀಕರು ಪ್ರೇಕ್ಷಕರಿಗೆ ಸ್ವಲ್ಪವಾದರೂ ಸೌಕರ್ಯ ಒದಗಿಸುವತ್ತ ಗಮನ ಹರಿಸುತ್ತಾರೆಂದು ನಿರೀಕ್ಷಿಸಬಹುದೆ?

—ನವಿಲೂರು ಪ್ರಕಾಶ್, ನುಗ್ಗಿಮಕ್ಕಿ.

ಪೈಪೋಟಿ ಬಸ್‌ಗಳು - ಪ್ರಯಾಣಿಕರ ಹಿತಾಸಕ್ತಿ ಗಾಳಿಪಾಲು

ಮಾನ್ಯರೆ,

ನಿಮ್ಮ 11.5.86ರ ಪತ್ರಿಕೆಯಲ್ಲಿ ಶೃಂಗೇರಿ–ಸಾಗರ ಭಾಗ್ಯಶ್ರೀ ಬಸ್‌ಗೆ ಹಳ್ಳಿಗರ ಸ್ವಾಗತ ಕುರಿತು ಓದಿದೆ. ಈ ಬಸ್ ನಿಜಕ್ಕೂ ಈ ಹಳ್ಳಿಗಳವರಿಗೆ ಸಂತಸದ ಸೌಕರ್ಯವೇ ಸರಿ.

ಆದರೆ ಈ ಬಸ್ ಪ್ರಾರಂಭವಾದ ನಂತರ ರಾತ್ರಿ ತೀರ್ಥಹಳ್ಳಿಯಿಂದ ಮೊದಲು 8.20ಕ್ಕೆ ಹೊರಡುತ್ತಿದ್ದ ಉದಯ ಬಸ್ಸು ಈಗ ರಾತ್ರಿ 7.20ಕ್ಕೇ ತೀರ್ಥಹಳ್ಳಿಯನ್ನು ಬಿಡುತ್ತದೆ. 7.30ಕ್ಕೆ ಭಾಗ್ಯಶ್ರೀ ಮೋಟಾರ್ಸ್‌ನವರ ಬಸ್ಸು ಬಿಡುತ್ತದೆ. ಇರುವ ಪ್ರಯಾಣಿಕರನ್ನು ಇಬ್ಬರೂ ಪೈಪೋಟಿಯಲ್ಲಿ ಹಂಚಿಕೊಳ್ಳುತ್ತಾರೆ. 7.30ರ ನಂತರ ಆ ಕಡೆಯಿಂದ ಯಾವುದೇ ಬಸ್ ಇಲ್ಲದೆ ಇದೊಂದು ದೊಡ್ಡ ಕೊರತೆಯಾಗಿದೆ. ಉದಯ ಮೋಟಾರ್ಸ್‌ನವರು ಹೊಂದಾಣಿಕೆ ಮಾಡಿಕೊಂಡು ಮೊದಲಿನಂತೆ ತೀರ್ಥಹಳ್ಳಿಯನ್ನು ರಾತ್ರಿ 8–20ಕ್ಕೆ ಬಿಟ್ಟರೆ ಪ್ರಯಾಣಿಕರಿಗೆ ಅನುಕೂಲ ಅಲ್ಲವೆ?

ಇನ್ನೊಂದು ಪ್ರಕರಣ: ಶಂಕರ್ ಕಂಪೆನಿಯವರು ಕೊಪ್ಪದಿಂದ–ತೀರ್ಥಹಳ್ಳಿಗೆ ಸಂಜೆ 4–30ಕ್ಕೆ ದಿಢೀರಾಗಿ ಒಂದು ಸರ್ವೀಸ್ ಶುರುಮಾಡಿರುವುದು. ಇದು ಪ್ರಯಾಣಿಕರ ಉಪಕಾರಕ್ಕೆ ಎನ್ನುವುದಕ್ಕಿಂತ ರಾಜಲಕ್ಷ್ಮಿ ಮೋಟಾರ್ಸ್‌ನವರಿಗೆ ಕೊಡುವ ಉಪದ್ರ ಎನಿಸುತ್ತದೆ. ಕೆಲವಾರು ದಿನಗಳಲ್ಲಿ ನಷ್ಟವಾಯಿತೆಂದು ರಾಜಲಕ್ಷ್ಮಿಯವರು ಬಸ್ ನಿಲ್ಲಿಸಿದರೆ ಶಂಕರ್‌ನವರೂ ಸಂತೋಷದಿಂದ ತಮ್ಮ ಸರ್ವೀಸನ್ನೂ ನಿಲ್ಲಿಸುತ್ತಾರೆ. ಇದು ಮಲೆನಾಡಿನವರ ಈವರೆಗಿನ ದಟ್ಟ ಅನುಭವ ಹಾಗೇ ಬೆಳಿಗ್ಗೆ 'ಉದಯ'ದವರಿಗೆ ಪೈಪೋಟಿಯಾಗಿ ಶಂಕರ್‌ನವರ ಸರ್ವೀಸ್ ಓಡುತ್ತಿದೆ. ಈ ಪೈಪೋಟಿ ಬದಲು ಬೆಳಿಗ್ಗೆ 7ರಿಂದ 9ರ ಮಧ್ಯದಲ್ಲಿ ಅಂದರೆ ಬೆಳಿಗ್ಗೆ 8ಕ್ಕೆ ತೀರ್ಥಹಳ್ಳಿಯಿಂದ ಕೊಪ್ಪ ಕಡೆಗೆ ಒಂದು ಸರ್ವೀಸ್ ಬಿಟ್ಟು ಪ್ರಯಾಣಿಕರಿಗೆ ಶಂಕರ್‌ನವರು ಸಹಕರಿಸಬಹುದೆನಿಸುತ್ತದೆ.

[ಬೇರೆ ಸರ್ವೀಸ್‌ನವರು ಯಾರಾದರೂ ಈ ಸಮಯದಲ್ಲಿ ಬಸ್ ಓಡಿಸಿದರೆ ಶಂಕರ್‌ನವರು ಎರಡು ಸರ್ವೀಸ್ (ಹಿಂದೊಂದು, ಮುಂದೊಂದು) ಬಿಡುವರೇನೋ!]

ಇಂಥ ದೊಡ್ಡ ಸಂಸ್ಥೆಗಳವರು ಇನ್ನಾದರೂ ಇಂಥ ಕತ್ತು ಹಿಸುಕುವ ಪೈಪೋಟಿಯನ್ನು ಬಿಟ್ಟು ಪ್ರಯಾಣಿಕರಿಗೆ ನಿಜವಾಗಿಯೂ ಅನುಕೂಲವಾಗುವಂಥ ರೀತಿಯಲ್ಲಿ ಬಸ್‌ಗಳನ್ನು ಓಡಿಸಿ ತಾವು ಪ್ರಚಾರ ಮಾಡಿಕೊಳ್ಳುವ "ಪ್ರಯಾಣಿಕರ ಸೇವೆಯೇ ನಮ್ಮ ಧ್ಯೇಯ" ಎಂಬ ಜಾಹೀರಾತಿನ ಮಾತುಗಳಿಗೆ ಒಂದಿಷ್ಟಾದರೂ ಅರ್ಥ ತಂದುಕೊಳ್ಳಬಾರದೆ? ಇದರಿಂದ ಅವರಿಗೂ ಲಾಭವೇ ಹೊರತು ನಷ್ಟವಿಲ್ಲ. ಇಂಥ 'ಕೊಲ್ಲುವ' ಪೈಪೋಟಿಯಿಂದ ಇಡೀ ಮಲೆನಾಡಿನಲ್ಲಿ ಹಿಂದಿನಂತೆಯೇ ಏಕ ಸ್ವಾಮ್ಯವನ್ನು ಇನ್ನೂ ಉಳಿಸಿಕೊಳ್ಳುವುದಂತೂ ಇನ್ನು ಮುಂದೆ ಸಾಧ್ಯವಿಲ್ಲದ್ದೆಂಬ ವಿಚಾರ ಅವರಿಗೆ ಈಗಾಗಲೇ ಮನವರಿಕೆಯಾಗಿಲ್ಲವಾದರೆ ಅದೊಂದು ದುರಂತದ ವಿಚಾರವೇ ಸರಿ— ಅವರಿಗೂ ಪ್ರಯಾಣಿಕರ ಪಾಲಿಗೂ ಸಹ!

—ಹೊಸ್ಮನೆ ರಮೇಶ್,
ಗಡಿಕಲ್ಲು.

ಬಹುಮುಖ ಪ್ರತಿಭೆಯ ಕಲಾವಿದ ಉದಯ್ ಜಾದೂಗಾರ್

(2ನೇ ಪುಟದಿಂದ

ಪ್ರೇಕ್ಷಕರನ್ನು ಅವಮಾನಗೊಳಿಸಲು ನನಗೆ ಇಷ್ಟವಿಲ್ಲ.

ಮುಂಜಾವು: ಈ ಕಲೆಯನ್ನು ಬೇರೆಯವರು ಕಲಿಯಬಹುದೇ? ನೀವು ಅಂತಹ ಶಿಕ್ಷಣಾರ್ಥಿಗಳಿಗೆ ಕಲಿಸಿಕೊಡುತ್ತೀರಾ?

ಉದಯ್: ಕಲಿಯಬೇಕು ಎಂದು ಬಹಳ ಜನ ಬರುತ್ತಾರೆ. ಆದರೆ ಇವತ್ತು ಕಲಿತು ನಾಳೆಯೇ ಪ್ರದರ್ಶನವನ್ನು ಮಾಡಬೇಕು ಅನ್ನುವವರು ಹೆಚ್ಚು ಮಂದಿ. ಹೀಗಾದಾಗ ಕಲಿಯುವುದು–ಕಲಿಸುವುದು ತುಂಬ ಕಷ್ಟ. ತುಂಬಾ ಪರಿಶ್ರಮ, ಏಕಾಗ್ರತೆ ಇರಬೇಕು. ಕಲಿತದ್ದನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಆ ಕಲೆ–ಕೈಚಳಕ ಕರಗತವಾಗಿರಬೇಕು. ಆತ್ಮವಿಶ್ವಾಸ–ನಂಬಿಕೆ ಬಂದ ಮೇಲೆ ಸಭಿಕರ ಮುಂದೆ ಪ್ರದರ್ಶನ ಮಾಡಬೇಕು. ನಾನು ಈ ವೃತ್ತಿ ಕಲಿಯಬೇಕಾದರೆ 12 ವರ್ಷಗಳ ಕಾಲ ತೆಗೆದುಕೊಂಡಿದ್ದೇನೆ. ಅಂತಹ ವಿದ್ಯಾರ್ಥಿಗಳು ಸಿಕ್ಕಿದರೆ ಖಂಡಿತ ಸ್ವೀಕರಿಸುತ್ತೇನೆ.

ಮುಂಜಾವು: ನಿಮ್ಮ ನಂತರ ಈ ವೃತ್ತಿಯ ಬೆಳವಣಿಗೆ ಹೇಗೆ?

ಉದಯ್: ಈಗ ನನ್ನ ತಮ್ಮಂದಿರು ಕಲಿಯುತ್ತಿದ್ದಾರೆ. ಯಾರು ಮುಂದುವರೆಸುತ್ತಾರೆ ಎನ್ನುವುದು ಕಾದು ನೋಡಬೇಕು.

ಮುಂಜಾವು: ಈ ಊರ., ಇಲ್ಲಿನ ಜನಗಳ ಬಗ್ಗೆ ನಿಮ್ಮ ಅಭಿಪ್ರಾಯ?

ಉದಯ್: ಹೋ, ಎಷ್ಟು ಹೇಳಿದರೂ ಸಾಲದು. ಇಷ್ಟು ಸುಂದರವಾದ ಊರು, ಪರಿಸರವನ್ನು ಬಿಟ್ಟು ಹೋಗುವುದಕ್ಕೆ ಮನಸ್ಸಾಗ್ತಾ ಇಲ್ಲ. ಇಲ್ಲಿನ ಜನ ಕೂಡಾ ಬೇರೆ ಎಷ್ಟೋ ಕಡೆಗಳಿಗಿಂತ ಬಹಳ ಪ್ರಬುದ್ಧರು, ಸದಭಿರುಚಿಯುವರು

ಅವರಿಗೆ ಪ್ರದರ್ಶನಕ್ಕೆ ವೇಳೆಯಾಗುತ್ತಾ ಬಂದಿತ್ತು. ಪರಸ್ಪರ ಧನ್ಯವಾದಗಳನ್ನು ಹೇಳಿಕೊಂಡು ಬೀಳ್ಕೊಂಡೆವು.

ಹೀಗೆ ನಿಷ್ಕಪಟವಾಗಿ, ಕಲಾತ್ಮಕವಾಗಿ 'ಪವಾಡ'ಗಳ ಪ್ರದರ್ಶನ ಮಾಡಿದರೂ ಜನರ ಮೂಢನಂಬಿಕೆಯ ಮೇಲೆ ಸ್ವಲ್ಪವಾದರೂ ಪರಿಣಾಮವಾಗದೆ ಇರಲಿ ಎಂಬ ಭರವಸೆಯ ಭಾವನೆ ಮನ ತುಂಬಿತ್ತು.

ಮಲೆನಾಡಿಗೆ ರೇಷ್ಮೆ ನಿರುಪಯುಕ್ತವೆ ?

(3ನೇ ಪುಟದಿಂದ)

ಮಾರುಕಟ್ಟೆಯದು ಅಷ್ಟು ಸಮಸ್ಯೆಯಲ್ಲ. ಸಾಗಾಣಿಕೆ ಇತ್ಯಾದಿ ಸುಲಭ. ರೇಷ್ಮೆ ಬೆಳೆಯುವ ಆಯಾ ಪ್ರದೇಶದಲ್ಲೇ ರೀಲರುಗಳು ಹೆಚ್ಚಿದರೆ ರೇಷ್ಮೆಗೂಡಿಗೆ ಗಿರಾಕಿ ಹೆಚ್ಚಿ ಬೆಳೆಗಾರರ ಲಾಭಾಂಶ ಹೆಚ್ಚಾಗುತ್ತೆ.

ಶಿವಮೊಗ್ಗದಲ್ಲಿ ಇಲಾಖೆ ಒಂದು ರೀಲಿಂಗ್ ಘಟಕ ಸ್ಥಾಪಿಸಿತ್ತು.. ಆದರೆ ಅದು ಬಹಳ ಕಾಲ ನಿರುಪಯುಕ್ತವಾಗಿ ಕೂತಿತ್ತು. ಈಗ ಗೊತ್ತಿಲ್ಲ. ಅದು ಈಗಲೂ ಹಾಗೆಯೇ ಇದೆಯಾದರೆ ಯಾರಾದರೂ ಖಾಸಗಿಯವರಿಗೆ ಕೊಡಬಹುದಲ್ಲ.

ಕೆಲವು ಸಲಹೆಗಳು

ರೇಷ್ಮೆ ಇಲಾಖೆಯವರು ಮಲೆನಾಡಿನಲ್ಲಿ ರೇಷ್ಮೆಯ ಪ್ರಚಾರ, ವಿಸ್ತರಣೆ ಮಾಡ ಬಯಸುವುದಾದರೆ ಮೊದಲಿಗೆ ಅದು ನಿಜವಾಗಿಯೂ ಲಾಭದಾಯಕವಾಗಿರುವಂತೆ ನೋಡಿಕೊಳ್ಳಬೇಕು. ಮಾರುಕಟ್ಟೆ, ರೀಲಿಂಗ್ ಮುಂತಾದ ವ್ಯವಸ್ಥೆಗಳನ್ನು ಮಾಡಿಕೊಂಡು ಮೇಲೆ ಹೇಳಿದ ಕುಂದು–ಕೊರತೆಗಳನ್ನೆಲ್ಲ ನಿವಾರಿಸಿ, ಸುಧಾರಣೆಗಳನ್ನು ಮಾಡಿಕೊಳ್ಳಬೇಕು.

1) ಒಂದು ಬೆಳೆ ಪೂರ್ತಿ ಆದ ಮೇಲೆಯೇ ಇನ್ನೊಂದು ಬೆಳೆ ಇಡುವ ಬದಲು 20 ದಿನಗಳ ಅಂತರದಲ್ಲಿ ಇನ್ನೊಂದು ಬೆಳೆ ಇಟ್ಟರೆ ಬೇಗ ಬೆಳೆ ಬರುವುದರಿಂದ ಲಾಭಾಂಶ ಹೆಚ್ಚಿಸಬಹುದು.

2) ಬೇರೆ ಆರ್ಥಿಕ ಬೆಳೆಗಳಿರುವ, ಅದರಲ್ಲೂ ಒಂಟಿಯಾಗಿರುವ ಬೆಳೆಗಾರರಿಗೆ ರೇಷ್ಮೆ ಬೆಳೆಯಲು ಒತ್ತಾಯಿಸಬಾರದು. ಕಡಿಮೆ ಜಮೀನಿದ್ದು ಸ್ವಂತ ದುಡಿಯುವವರು ಇರುವ, ಅದರಲ್ಲೂ ಬೇರೆ ಆರ್ಥಿಕ ಬೆಳೆಗಳನ್ನು ಬೆಳೆಯದ ಸಣ್ಣ ಹಿಡುವಳಿದಾರರನ್ನು ಇದಕ್ಕೆ ಹೆಚ್ಚಾಗಿ ಉತ್ತೇಜಿಸಬೇಕು.

3) ದೊಡ್ಡ, ದೂರದ ಊರುಗಳಲ್ಲಿ ದೊಡ್ಡ ದೊಡ್ಡ ಮಾರುಕಟ್ಟೆ ಕಟ್ಟಡಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಸುರಿಯುವ ಬದಲು, ಬೆಳೆಯ ಪ್ರದೇಶಗಳಲ್ಲಿ ರೀಲರ್‌ಗಳಿಗೆ ಹೆಚ್ಚಿನ ಸಾಲ, ನೆರವು ಮುಂತಾದ ರೀತಿಗಳಿಂದ ಹೆಚ್ಚಿನ ಉತ್ತೇಜನ ಕೊಟ್ಟು ಸಾಕಷ್ಟು ಸಂಖ್ಯೆಗಳಲ್ಲಿ ಅವರುಗಳನ್ನು ತಯಾರು ಮಾಡಬೇಕು. ಅಲ್ಲದೆ ಸಾಗಾಣಿಕೆಗೆ ಮತ್ತು ಉತ್ಪಾದನೆಗೆ ತಕ್ಕ ಮಾರುಕಟ್ಟೆ ಅಭಿವೃದ್ಧಿಗೆ ಸಹ ವ್ಯವಸ್ಥೆ ಮಾಡಬೇಕು.

4) ಇಲಾಖೆಯವರು ಒಂದು ಪ್ರದೇಶದ ಎಲ್ಲ ಬೆಳೆಗಾರರಿಗೂ ಒಟ್ಟಿಗೇ ಮೊಟ್ಟೆ ಒದಗಿಸಿ ಎಲ್ಲರ ಬೆಳೆಯನ್ನೂ ಒಟ್ಟಿಗೇ ಸಾಗಿಸುವ ವ್ಯವಸ್ಥೆ ಮಾಡಬೇಕು.

ನಾವು ನೋಡುತ್ತಿರುವಂತೆ ಬಹುತೇಕ ಬೆಳೆಗಾರರೆಲ್ಲ 2–3 ವರ್ಷದೊಳಗೇ ಬೆಳೆ ಕೈ ಬಿಡುತ್ತಾರೆ. ನಿಜವಾಗಿ ಲಾಭವಿರುವುದಾದಲ್ಲಿ ಒಬ್ಬರನ್ನು ನೋಡಿ ಮತ್ತೊಬ್ಬರಂತೆ ಹೊಸದಾಗಿ ಆರಂಭಿಸುತ್ತಾರೆಯೇ ಹೊರತು ಯಾಕೆ ಕೈ ಬಿಡುತ್ತಾರೆ?

(ಚಳಿ ವಿಪರೀತ ಇಲ್ಲದಿದ್ದರೆ ವರ್ಷದಲ್ಲಿ ಸುಮಾರು 8 ತಿಂಗಳು ಬೆಳೆ ತೆಗೆಯಬಹುದು. ಚಳಿ ತೀರ ಜಾಸ್ತಿಯಾದರೆ ಮಾತ್ರ, ಸಚಿವರು ಹೇಳಿರುವಂತೆ, ಬೆಳೆಗಾರರಿಗೆ 5 ತಿಂಗಳಷ್ಟೇ ಕೆಲಸ ಇರುತ್ತದೆ.)

—ಬಿ ಎಸ್. ಶ್ರೀನಿವಾಸ್,
ಹಂದಿಗೋಡು, ಕೊಪ್ಪ.

ನ.ರಾ. ಪುರದ ಪೇಟೆ ಆಂಜನೇಯ ದೇವಾಲಯ : ಬಗೆಹರಿದ ವಿವಾದ

ನ.ರಾ. ಪುರ: ಇಲ್ಲಿನ ಬಸ್ ಸ್ಟ್ಯಾಂಡ್ ಎದುರಿರುವ ಪೇಟೆ ಆಂಜನೇಯ ಸ್ವಾಮಿ ದೇವಾಲಯದ ವಿವಾದಗಳೆಲ್ಲ ಬಗೆಹರಿದು ಪೂರ್ಣ ನಿವೇಶನ ಖುಲ್ಲಾ ಆಗಿದ್ದು, ನೂತನ ಕಟ್ಟಡದ ಕೆಲಸ ಆರಂಭವಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಮುಂಭಾಗದ ಹಾಲ್‌ಗೆ ಮಾಡು ಹಾಕಲಾಗುತ್ತದೆ ಎಂದು ಕನ್ವೀನರ್ ಹೆಚ್. ಬೊಮ್ಮಪ್ಪ ತಿಳಿಸಿದ್ದಾರೆ.

ಸರ್ಕಾರದ ವಂತಿಗೆ ಮತ್ತು ಸಾರ್ವಜನಿಕರಿಂದ ಸಂಗ್ರಹಿಸಿದ ಹಣ ಒಟ್ಟು 1 ಲಕ್ಷ ರೂ. ಮಾತ್ರ ಇದ್ದು, ಗರ್ಭಗುಡಿಯ ನಿರ್ಮಾಣಕ್ಕೆ ಇನ್ನೂ 1 ಲಕ್ಷ ರೂ. ಬೇಕಾಗಬಹುದೆಂದಿರುವ ಅವರು, ಸಾರ್ವಜನಿಕರಿಂದ ಸಕಾಲದಲ್ಲಿ ನೆರವು ದೊರೆತಲ್ಲಿ ಬರುವ ಆಕ್ಟೋಬರ್ ವೇಳೆಗೆ ಪ್ರತಿಷ್ಠಾಪನೆ ನೆರವೇರಿಸುವ ಉದ್ದೇಶವಿದೆಯೆಂದು ತಿಳಿಸಿದ್ದಾರೆ.

ಒಂದು ಹಳ್ಳಿ ಶಾಲೆಯ ಕೊರತೆಗಳ ಕಥೆ

ಸರಕಾರವು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನೇನೋ ಸ್ಥಾಪಿಸಿದೆಯಾದರೂ ಅವುಗಳನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುತ್ತಿಲ್ಲವಾಗಿ ಎಷ್ಟೋ ಶಾಲೆಗಳು ಪತನವಾಗುವ ಸ್ಥಿತಿಯಲ್ಲಿವೆ. ಇಂಥದೊಂದು ಉದಾಹರಣೆ ಹರಿಹರಪುರ ಸಮೀಪದ ಮೇಲುಬೆಳ್ರೆ ಶಾಲೆ.

1961ರಲ್ಲಿಯೇ ಸ್ಥಾಪನೆಯಾಗಿ ಸ್ವಲ್ಪ ಕಾಲ ಸುಗಮವಾಗಿ ನಡೆದ ಈ ಶಾಲೆಯಲ್ಲಿ ಈಗ ಅಧ್ಯಾಪಕರ ತೀವ್ರ ಕೊರತೆಯಿದೆ. 1983ರಲ್ಲಿ 4 ಜನ, 84ರಲ್ಲಿ 3 ಜನ ಇದ್ದು 85ರಲ್ಲಿ ಇಬ್ಬರು ಅಧ್ಯಾಪಕರು ಮಾತ್ರ ಉಳಿದಿದ್ದು, ಬಹಳ ಕಷ್ಟದಿಂದ ಶಾಲೆ ನಡೆಸುತ್ತಿದ್ದಾರೆ.

ಈ ಶಾಲೆ ಗುಡ್ಡದ ಮೇಲಿದ್ದು ಜನವಸತಿಯಿಂದ ಬಹಳ ದೂರದಲ್ಲಿದ್ದು ಇಲ್ಲಿ ಮಕ್ಕಳಿಗೆ ಕುಡಿಯುವ ನೀರಿಗೆ ಸೌಕರ್ಯವಿಲ್ಲವಾಗಿದೆ. ಈ ಹಿಂದೆ ಒಂದು ಫರ್ಲಾಂಗ್ ದೂರದ ಒಂದು ಸಣ್ಣ ಬಾವಿಯಿಂದ ನೀರು ತರುತ್ತಿದ್ದರು. ಈಗ ಅಲ್ಲಿನವರು ಅದಕ್ಕೆ ಕೊಳವೆ ಇಡಿಸಿ ನೀರು ತೆಗೆದುಕೊಳ್ಳುತ್ತಿದ್ದಾರೆ. ನಂತರ 1 ಕಿ.ಮೀ. ದೂರದ ಒಬ್ಬರು ಭಟ್ಟರ ಮನೆಯಿಂದ ನೀರು ತರುತ್ತಿದ್ದರು. ಆದರೆ ಅದು ಅಸಾಧ್ಯ ಪ್ರಯಾಸಕರವಾದ್ದರಿಂದ ಮಕ್ಕಳು ಈಗ ತಮ್ಮ ಮನೆಗಳಿಂದಲೇ ನೀರು ತಂದುಕೊಳ್ಳಬೇಕಾಗಿದೆ.

ಸರ್ಕಾರ ತಕ್ಷಣ ಇಲ್ಲಿಗೆ ಇನ್ನಿಬ್ಬರು ಉಪಾಧ್ಯಾಯರನ್ನು ನೇಮಿಸಿ, ಹಾಗೆಯೇ ಒಂದು ಬಾವಿಯನ್ನು ತೋಡಿಸಬೇಕಾಗಿ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

(ವರದಿ: ಡಿ. ಎಸ್. ದಿನೇಶ್)

ಲೋಕೋಪಯೋಗಿ ಕಾಮಗಾರಿಗಳು

(1ನೇ ಪುಟದಿಂದ)

ಗಿರಿಜನ ಉಪ ಯೋಜನೆಯಲ್ಲಿ ಕೊಪ್ಪ. ತಾ॥ನ ಅತ್ತಿಕೊಡಿಗೆ, ಶಾಂತಿಗ್ರಾಮದಿಂದ ಮೆಣಸಿನಹಾಡ್ಯಕ್ಕೆ ಸಂಪರ್ಕ ಕಲ್ಪಿಸುವ 8.60 ಕಿ.ಮೀ. ರಸ್ತೆ ಕಾರ್ಯಕ್ಕೆ 10.38 ಲಕ್ಷ ರೂ.ಗಳನ್ನು ಬಿಡುಗಡೆ. ಮಾಡಿದ್ದು 9 60 ಲಕ್ಷ ರೂ.ಗಳನ್ನು ವೆಚ್ಚ ಮಾಡಿ ರಸ್ತೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ಎಂದರಲ್ಲದೆ ಸೋಮಲಾಪುರ ಕೂಡು ರಸ್ತೆಯ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಗ್ರಾಮಾಂತರ ಭೂರಹಿತರ ಉದ್ಯೋಗ ದೃಢೀಕರಣ ಯೋಜನೆಯನ್ವಯ ಕೊಪ್ಪ ತಾ॥ ಭೈರೇದೇವರು ಸಂಪರ್ಕ ರಸ್ತೆ ನಿರ್ಮಾಣಕ್ಕಾಗಿ 2.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು ಈವರೆವಿಗೆ 59 ಸಾವಿರ ರೂ.ಗಳನ್ನು ವೆಚ್ಚ ಮಾಡಲಾಗಿದೆ. ರಸ್ತೆ ನಿರ್ಮಾಣ ಕಾರ್ಯ ತೀವ್ರಗತಿಯಲ್ಲಿ ಜರುಗುತ್ತಿದೆ ಎಂದರು. ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಯನ್ವಯ 11 ಕಾಮಗಾರಿಗಳನ್ನು ಪ್ರಾರಂಭಿಸಿದ್ದು ಇವುಗಳಲ್ಲಿ ಕೆಲವು ಕಾಮಗಾರಿಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿ ಜರುಗುತ್ತಿವೆ. ಈ ಬಾಬಿಗಾಗಿ 2.78 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ ಎಂದರು.

ಅಡಿಕೆ ಧಾರಣೆ

ಶಿವಮೊಗ್ಗ

ತಾ॥ 13.5.86

ಸರಕು: 2700 – 3080
ಬೆಟ್ಟೆ 1600 – 1900
ಗೊರಬಲು: 900 – 1460

24.5.86 ಶನಿವಾರ ಮ್ಯಾಮ್ಕೋಸ್‌ನಲ್ಲಿ ಏಲಕ್ಕಿ ವ್ಯಾಪಾರವಿದೆ.

ಸಾಗರ

ತಾ॥ 14.5.86

ಚಾಲಿ ರೂ. 1581 – 1751
ಸಿಪ್ಪೆ ಗೋಟು ರೂ. 539 – 712
ಆಪಿ ರೂ. 3201

ಏಲಕ್ಕಿ ಧಾರಣೆ

ಸಕಲೇಶಪುರ

ವ್ಯಾಪಾರದ ತಾರೀಖು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
29.4.86	170	106
30.4.86	205	102
1.5.86	204	84
2.5.86	204	107
ಸಿರ್ಸಿ		
5.5.86	133	95
ಏಲಕ್ಕಿ ಮಂಡಳಿ ಹರಾಜು ಕೇಂದ್ರ		
5.5.86	161	75

(ಸಕಲೇಶಪುರದ ಉಳಿದ ಮಂಡಿಗಳಲ್ಲಿ ಮೇ ಮೊದಲ ವಾರ ವ್ಯಾಪಾರ ನಡೆಯಲಿಲ್ಲ.)

ಹಿಂ॥ ವರ್ಗದ ಹಾಸ್ಟೆಲ್‌ಗಳಿಗೆ ಅರ್ಜಿ ಆಹ್ವಾನ

ಶೃಂಗೇರಿ: ಇಲ್ಲಿನ ಹಿಂದುಳಿದ ವರ್ಗದ ಬಾಲಕರ ವಿದ್ಯಾರ್ಥಿ ನಿಲಯ ಮತ್ತು ಹಿನ್ನುಳಿದ ವರ್ಗದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ 1986–87ನೇ ಸಾಲಿಗೆ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 5–6–1986. ಅಗತ್ಯವಿರುವವರು ಈ ಅನುಕೂಲವನ್ನು ಪಡೆಯಬಹುದು.

ಕೊಪ್ಪ ಪುರಸಭೆಗೆ ಉಳಿತಾಯ ಬಜೆಟ್

ಕೊಪ್ಪ: ಇಲ್ಲಿನ ಪುರಸಭೆಯ 1986–87ನೇ ಸಾಲಿನ ಆಯವ್ಯಯದಲ್ಲಿ 22 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದ್ದು, 6 ಲಕ್ಷ ರೂ. ಉಳಿತಾಯ ನಿರೀಕ್ಷಿಸಲಾಗಿದೆ ಎಂದು ಪುರಸಭೆಯ ಮೂಲಗಳು ತಿಳಿಸಿವೆ.

ಬಾಳೆಹೊನ್ನೂರಿನಲ್ಲಿ 'ತಾಳಿಭಾಗ್ಯ' ವಿವಾಹ

ನ.ರಾ. ಪುರ: ಸರ್ಕಾರದ ತಾಳಿಭಾಗ್ಯ ಯೋಜನೆಯಡಿ 24 ಜೊತೆ ಸಾಮೂಹಿಕ ವಿವಾಹಗಳನ್ನು ಮೇ 22 ರಂದು ಬಾಳೆಹೊನ್ನೂರಿನಲ್ಲಿ ನಡೆಸಲಾಗುವುದೆಂದು ತಹಸೀಲ್ದಾರ್ ಸೋಮಶೇಖರ್ ತಿಳಿಸಿದ್ದಾರೆ.

ಸ್ಥಳೀಯ ರೋಟರಿ ಕ್ಲಬ್ ಸಹಯೋಗದೊಂದಿಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು, ಮಾಗ ಚಂದ್ರಶೇಖರ ಮತ್ತು ಸ್ಥಳೀಯ ರೋಟರಿ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹಲ್ಲೆ: ಆರೋಪಿಗಳು ಪರಾರಿ

ಕೊಪ್ಪ: ಇಲ್ಲಿಗೆ ಸಮೀಪದ ಬ್ರಹ್ಮನಕೋಡು ಎಂಬಲ್ಲಿ ಅಣ್ಣೇಗೌಡರ ಮಗ ನಾಗರಾಜ, ಆತನ ಭಾವ ನಾರಾಯಣ ಎಂಬವರು ಸೇರಿ ಶಿವರಾಮ ಎಂಬಾತನಿಗೆ ಹಳೇ ಜಿದ್ದಿನಿಂದ ಹೊಡೆದು ಗಾಯಗೊಳಿಸಿದ್ದು ಆತನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಕೊಪ್ಪ ಪೋಲೀಸರು ತನಿಖೆ ನಡೆಸುತ್ತಿದ್ದು ಆರೋಪಿಗಳು ಪರಾರಿಯಾಗಿದ್ದಾರೆನ್ನಲಾಗಿದೆ.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.